ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿರುವ ಬಗ್ಗೆ

೧೨೨೭ ಶ್ರೀ ಗೋಪಾಲ ಮಯಿಕುಂದ ಕಾನಡೆ.–(ಸಿರ್ಸಿ)ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸಕ್ತ ಸರ್ಕಾರಿ ಅಸ್ತಿತ್ವಕ್ಕೆ ಬಂದ ನಂತರ ಭ್ರಷ್ಟಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಎಷ್ಟು ಆಯೋಗಗಳನ್ನು ನೇಮಿಸಿದೆ ಹಾಗೂ ಆಯೋಗಗಳ ಹೆಸರುಗಳೇನು.

ಆ) ಸದರಿ ಆಯೋಗಗಳಿಗೆ, ತಗುಲಿದ ಒಟ್ಟು ವೆಚ್ಚ ಎಷ್ಟು.

ಇ) ಈ ಆಯೋಗಗಳು ಎಷ್ಟು ಅಧಿಕಾರಿಗಳ ವಿರುದ್ಧ ತನಿಖೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ ಆ ವರದಿಯ ವಿವರಗಳೇನು ಹಾಗೂ ಆ ಅಧಿಕಾರಿಗಳ ಹೆಸರು ವ್ಯತ್ತು ವಿಳಾಸಗಳೇನು.

ಈ) ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).–

ಅ) ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರವು ಇದುವರೆವಿಗೂ ಯಾವ ಆಯೋಗಗಳನ್ನು ರಚಿಸಿರುವುದಿಲ್ಲ. ಅಂತಹ ಪ್ರಕರಣಗಳು ಲೋಕಾಯುಕ್ತರ ವ್ಯಾಪ್ತಿಗೆ ಒಳಪಡುತ್ತವೆ.

ಆ)
ಇ) } " ಅ " ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.
ಈ)

ಮಹಿಳೆಯರನ್ನು ಪೋಲೀಸ್ ಸ್ಟೇಷನ್ನಿಗೆ ಕರೆಸುವ ಬಗ್ಗೆ

೧೫೭೭, ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಗೃಹ ಮಂತ್ರಿಗಳು ಈ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೇ ?

೧) ಮಹಿಳೆಯರನ್ನು ಯಾವ ಕಾರಣಕ್ಕೂ ಪೋಲೀಸ್ ಠಾಣೆಗೆ ಕರೆಸಕೂಡದೆಂದು ನಿಯಮಾವಳಿಯಲ್ಲಿ ಇದೆಯೇ ?

೨) ಹಾಗಿದ್ದ ಪಕ್ಷದಲ್ಲಿ ಇದನ್ನು ಏಕೆ ತೆಗೆದುಹಾಕಬಾರದು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

೧) ನಿಯಮಾವಳಿಯಲ್ಲಿ ಇಂತಹ ನಿಷೇಧ ಇರುವುದಿಲ್ಲ

೨) ಉದ್ಭವಿಸುವುದಿಲ್ಲ.

ಫಾ. ಜೇಕಬ್ ಸಮಿತಿಯ ವರದಿಯ ಬಗ್ಗೆ

೧೧೫೨. ಶ್ರೀ ಎಂ, ಎಸ್, ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾಜಿ ವಿಧಾನ ಸಭಾ ಸದಸ್ಯರಾದ ಫಾ. ಜೇಕಬ್‌ರವರ ನೇತೃತ್ವದಲ್ಲಿ ಪುರಸಭೆಗಳ ವರಮಾನವನ್ನು ಹೆಚ್ಚಿಸುವ ಬಗ್ಗೆ ಸಮಿತಿಯೆನ್ನು ಸರ್ಕಾರದವರು ಯಾವಾಗ ರಚಿಸಿದರು.

ಆ) ಈ ಸಮಿತಿಯು ವರದಿಯನ್ನು ಯಾವಾಗ ಸಲ್ಲಿಸಿದೆ.

ಇ) ಇದಾದ ನಂತರ ಇನ್ನಾವುದಾದರೂ ಸಮಿತಿಯನ್ನು ರಚಿಸಲಾಗಿದೆಯೇ ಹಾಗಿದ್ದಲ್ಲಿ ವರದಿ ಬಂದಿದೆಯೇ.